ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE: 22/6/20

# 55 ವರ್ಷ ಮೀರಿದ ಪೊಲೀಸರಿಗೆ ವಿಶ್ರಾಂತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಮಹಾಮಾರಿ ಪೊಲೀಸ್ ಸಿಬ್ಬಂದಿಯ ನಿದ್ದೆಗೆಡಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಕಮಿಷನರ್ ಭಾಸ್ಕರರಾವ್, ಪೊಲೀಸ್ ಸಿಬ್ಬಂದಿಗೆ 13 ಅಂಶಗಳ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚನೆ ನೀಡಿದ್ದಾರೆ.

## ಸಿಬ್ಬಂದಿಗೆ 13 ಅಂಶಗಳ ಮಾರ್ಗಸೂಚಿ

## ಆರಕ್ಷರಲ್ಲಿ ಸೋಂಕು ಹೆಚ್ಚುತ್ತಿರುವ ಹಿನ್ನೆಲೆ



## ಮಾರ್ಗಸೂಚಿಯಲ್ಲಿನ ಪ್ರಮುಖ ಅಂಶಗಳು

- 55 ವರ್ಷ ಮೇಲ್ಪಟ್ಟ ಸಿಬ್ಬಂದಿಗೆ ಕಡ್ಡಾಯವಾಗಿ ವಿಶ್ರಾಂತಿ ನೀಡಬೇಕು. ಅವರು ಮನೆಯಲ್ಲಿಯೇ ಇರಬೇಕು, ಯಾವುದೇ ಕಾರಣಕ್ಕೂ ಊರಿಗೆ ಹೋಗುವಂತಿಲ್ಲ.
- ಸಿಬ್ಬಂದಿ ಕೊರತೆ ಉಂಟಾದಲ್ಲಿ ಹೋಂ ಗಾರ್ಡ್ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡು ಅವರ ಸುರಕ್ಷತೆಯನ್ನು ನೋಡಿಕೊಂಡು ಕರ್ತವ್ಯ ನಿರ್ವಹಿಸುವಂತೆ ಗಮನ ಹರಿಸಬೇಕು.
- ಠಾಣೆಯ ಒಳಭಾಗ ಯಾರೂ ಬರದಂತೆ ನೋಡಿಕೊಂಡು ಹೊರಗಡೆಯೇ ಸಾರ್ವಜನಿಕರ ದೂರುಗಳನ್ನು ಆಲಿಸಬೇಕು ಹಾಗೂ ಸಮಸ್ಯೆ ಕೇಳುವ ಸಮಯದಲ್ಲಿ ಸಿಬ್ಬಂದಿ ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕ್, ಹ್ಯಾಂಡ್ ಗ್ಲೌಸ್ ಧರಿಸಬೇಕು. ಅವಶ್ಯಕತೆಯಿದ್ದಲ್ಲಿ ಪಿಪಿಇ ಕಿಟ್ ಬಳಸಬೇಕು.
- ಅಪರಾಧಿಗಳನ್ನು ಅನಿವಾರ್ಯತೆ ಇಲ್ಲದೇ ಇದ್ದಲ್ಲಿ ಬಂಧಿಸುವ ಪ್ರಕ್ರಿಯೆ ಮಾಡಬಾರದು ಹಾಗೂ ಬಂಧಿಸುವಾಗ ಡಿಸಿಪಿ, ಎಸಿಪಿ ಅನುಮತಿ ಪಡೆದು ಠಾಣೆಯ ಹೊರಗಡೆಯೇ ಪ್ರಕ್ರಿಯೆ ಮುಗಿಸಬೇಕು.
- ಠಾಣೆಯ ಸರಹದ್ದಿನಲ್ಲಿ 25 ಮಂದಿ ಸಿಬ್ಬಂದಿಗೆ ಆಗುವಷ್ಟು ಹಾಗೂ ಅವರಿಗೆ ಬಿಸಿನೀರು ಸಿಗುವ, ಶೌಚಾಲಯ ಇರುವಂತಹ ಕಲ್ಯಾಣ ಮಂಟಪವನ್ನು ವ್ಯವಸ್ಥೆ ಮಾಡಿಕೊಡಬೇಕು.
- ಠಾಣೆಯ ಒಳಭಾಗದಲ್ಲಿ ಕುಡಿಯಲು ಬಿಸಿ ನೀರು, ಕೈ-ಕಾಲು ತೊಳೆದುಕೊಳ್ಳಲು, ಸ್ನಾನ ಮಾಡಲು ಸಹ ಬಿಸಿ ನೀರು ಸಿಗುವಂತೆ ಅನುವು ಮಾಡಿಕೊಡಲು ಹಾಗೂ ಠಾಣೆಯಲ್ಲಿ ಯಾವಾಗಲೂ ಸ್ಯಾನಿಟೈಸರ್, ಮಾಸ್ಕ್, ಪಿಪಿಇ ಕಿಟ್ ಇರುವಂತೆ ನೋಡಿಕೊಳ್ಳಬೇಕು.
- ಮುಖ್ಯವಾಗಿ ಉತ್ತರ ಕರ್ನಾಟಕದ ಯಾವುದೇ ಅಧಿಕಾರಿ, ಸಿಬ್ಬಂದಿ ಬೆಂಗಳೂರು ಬಿಟ್ಟು ಹೋಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.